ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1170
ಸದಸ್ಯರ ಹೆಸರು	:	ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	22-09.2021.
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರ ಸಂ:	ಪ್ರಶ್ನೆಗಳು	ಉತ್ತರಗಳು
ಅ)	ಕಲಬುರಗಿ ಜಿಲ್ಲೆ ಅಫಜಲಪೂರ ತಾಲ್ಲೂಕಿನಿಂದ ಕರಜಗಿ ಗ್ರಾಮದ ಮೂಲಕ ಹೊಸೂರು ಸೇರುವ ರಸ್ತೆ ಕಾಮಗಾರಿಯೂ ಪೂರ್ಣಗೊಂಡಿದ್ದು ಯಾವಾಗ	ಕಲಬುರಗಿ ಜಿಲ್ಲೆ ಅಫಜಲಪೂರ ತಾಲೂಕಿನಿಂದ ಕರಜಗಿ ಗ್ರಾಮದ ಮೂಲಕ ಹೊಸೂರ ಸೇರುವ ರಸ್ತೆಯು ಗುಲಬರ್ಗಾ-ಹೊಸೂರ ರಾಜ್ಯ ಹೆದ್ದಾರಿ-22 ಆಗಿದ್ದು, ಅಫಜಲಪೂರ ತಾಲೂಕಿನ ಅಡಿಯಲ್ಲಿ ಒಟ್ಟು 55.00 ಕಿ.ಮೀ. ನಿಂದ 99.80 ಕಿ.ಮೀ. ರಸ್ತೆ ಇರುತ್ತದೆ. 1. ಅಫಜಲಪೂರ (ಕಿ.ಮೀ.54.850) ದಿಂದ ಕರಜಗಿ ಹತ್ತಿರ (ಕಿ.ಮೀ.80.00) ವರೆಗಿನ ಹೊಸೂರು (ಕಿ.ಮೀ.99.80) ಸೇರುವ ರಸ್ತೆಯ ಅಭಿವೃದ್ಧಿಯನ್ನು ಕಲಬುರಗಿಯಿಂದ ಮಹಾರಾಷ್ಟ್ರ ಗಡಿಯವರೆಗೆ ವಯಾ ಚೌಡಾಪೂರ, ಘಾನಗಾಪೂರ, ಅಫಜಲಪೂರ, ಕರಜಗಿಯ ಆಯ್ದ ಭಾಗಗಳಲ್ಲಿ ಅಂತರರಾಜ್ಯ ಜೋಡಣೆಯಡಿಯಲ್ಲಿ (ISC) ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ, ಕಲಬುರಗಿ ಇವರಿಂದ ಕೈಗೊಂಡಿದ್ದು, ಕಾಮಗಾರಿಯು ದಿನಾಂಕ:31.03.2017 ರಂದು ಪೂರ್ಣಗೊಂಡಿರುತ್ತದೆ. 2. ಸದರಿ ರಸ್ತೆಯ ಕಿಮೀ.80.00 ರಿಂದ 81.00 ರವರೆಗೆ 2018-19ನೇ ಸಾಲಿನ ಅಪೆಂಡಿಕ್ಸ್-ಇ ರಾಜ್ಯ ಹೆದ್ದಾರಿ ಯೋಜನೆಯಡಿಯಲ್ಲಿ ಲೋಕೋಪಯೋಗಿ ಇಲಾಖೆ ವಿಭಾಗ, ಕಲಬುರಗಿ ಇವರಿಂದ ಅಭಿವೃದ್ಧಿ ಪಡಿಸಲಾಗಿದ್ದು, ಕಾಮಗಾರಿಯು ದಿನಾಂಕ: 02-04-2020 ರಲ್ಲಿ ಪೂರ್ಣಗೊಂಡಿರುತ್ತದೆ. 3. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಯೋಜನಾ ಅನುಷ್ಠಾನ ಘಟಕದ ವತಿಯಿಂದ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ-2ರ ಕಾಮಗಾರಿಯಾದ ಪ್ಯಾಕೇಜ್ ಸಂಖ್ಯೆ:68 ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಗುಲ್ಬರ್ಗ-ಹೊಸೂರು-ಎಸ್‌ಹೆಚ್-22, ಕಿ.ಮೀ.58.15 ರಿಂದ 99.80 ರವರೆಗೆ (ಆಯ್ದ ಭಾಗಗಳಲ್ಲಿ) ರಸ್ತೆ ಅಭಿವೃದ್ಧಿ ಕಾಮಗಾರಿಯಲ್ಲಿ ಕಿ.ಮೀ.80.00 ರಿಂದ 99.80 ರವರೆಗೆ ಒಟ್ಟು 19.80 ಕಿ.ಮೀ.ಗಳನ್ನು ನಿರ್ವಹಿಸಿದ್ದು, ದಿನಾಂಕ:31-03-2016 ರಂದು ಪೂರ್ಣಗೊಂಡಿರುತ್ತದೆ.
ಆ)	ಈ ರಸ್ತೆ ಕಾಮಗಾರಿಗೆ ಖರ್ಚಾದ ಒಟ್ಟು ಮೊತ್ತವೆಷ್ಟು; (ವಿವರ ನೀಡುವುದು)	1. ರಾಷ್ಟ್ರೀಯ ಹೆದ್ದಾರಿ, ಕಲಬುರಗಿ ಇವರಿಂದ ಕೈಗೊಳ್ಳಲಾದ ಕಾಮಗಾರಿಗಳ ವಿವರ ಕೆಳಕಂಡಂತಿದೆ:

ಕ್ರ. ಸಂ.	ಕಾಮಗಾರಿಯ ಹೆಸರು	ಅನುಮೋದನೆಯಾದ ಮೊತ್ತ ರೂ.	ಖರ್ಚು ಆದ ಮೊತ್ತ ರೂ.	ಒಟ್ಟು ಉದ್ದ	ನಿರ್ವಹಣಾ ಅವಧಿ
1.	ರಸ್ತೆ ಅಭಿವೃದ್ಧಿ ಕಲಬುರಗಿ ಯಿಂದ ಮಹಾರಾಷ್ಟ್ರ ಗಡಿ ಯವರೆಗೆ ವಯಾ ಚೌಡಾಪೂರ, ಘಾನಗಾಪೂರ, ಅಫಜಲಪೂರ, ಕರಜಗಿ (ಆಯ್ದ ಭಾಗಗಳಲ್ಲಿ) ಕರ್ನಾಟಕ ರಾಜ್ಯದಲ್ಲಿ ಅಂತರರಾಜ್ಯ ಜೋಡಣೆಯಲ್ಲಿ	ರೂ.82.54 ಕೋಟಿ	ರೂ.82.53 ಕೋಟಿ	46.125 ಕಿ.ಮೀ	3 ವರ್ಷ ದಿನಾಂಕ 01.04.17 ರಿಂದ 31.3.2020

		2. ಸದರಿ ರಸ್ತೆಯ ಕಿಮೀ.80.00 ರಿಂದ 81.00 ರವರೆಗೆ 2018-19ನೇ ಸಾಲಿನ ಅಪೆಂಡಿಕ್ಷ-ಇ ರಾಜ್ಯ ಹೆದ್ದಾರಿ ಯೋಜನೆಯಡಿಯಲ್ಲಿ ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿಯಿಂದ ಅಂದಾಜು ಮೊತ್ತ ರೂ.150.00 ಲಕ್ಷಗಳಲ್ಲಿ ಕೈಗೊಂಡು ದಿನಾಂಕ:02.04.2020 ರಂದು ಕಾಮಗಾರಿ ಮುಕ್ತಾಯಗೊಳಿಸಿ 162.63 ಲಕ್ಷಗಳು ವೆಚ್ಚ ಮಾಡಲಾಗಿರುತ್ತದೆ. 3. ಎಸ್.ಹೆಚ್.ಡಿ.ಪಿ. ವತಿಯಿಂದ ಹಂತ-2ರ ಪ್ಯಾಕೇಜ್ ಸಂಖ್ಯೆ:68 ರಲ್ಲಿ ಕೈಗೊಂಡ ಕಾಮಗಾರಿಯ ಒಟ್ಟಾರೆ ವೆಚ್ಚವು ರೂ.22.88 ಕೋಟಿಗಳು ಆಗಿರುತ್ತದೆ.
ಇ)	ಹಾಲಿ ಅಫಜಲಪೂರ ತಾಲ್ಲೂಕಿನಿಂದ ಹೊಸೂರು ಸೇರುವ ರಸ್ತೆಯೂ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಯಾವ ಕಾಲಮಿತಿ ಯೊಳಗೆ ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗುವುದು?	ಅಫಜಲಪೂರ ತಾಲ್ಲೂಕಿನಿಂದ ಹೊಸೂರು ಸೇರುವ ರಸ್ತೆಯೂ ಹಾಳಾಗಿರುವುದು ಗಮನಕ್ಕೆ ಬಂದಿರುತ್ತದೆ. 1. ಲೋಕೋಪಯೋಗಿ ಇಲಾಖೆ ವಿಭಾಗದ ವತಿಯಿಂದ 2021-22 ನೇ ಸಾಲಿನ ಅಪೆಂಡಿಕ್ಸ್-ಇ ಯೋಜನೆ ಅಡಿಯಲ್ಲಿ ರೂ.500.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕಿ.ಮೀ.55.00 ರಿಂದ ಕಿ.ಮೀ.77.00 ರವರೆಗೆ ಮರುಡಾಂಬರೀಕರಣ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಸದ್ಯದಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು 2021-22 ನೇ ಸಾಲಿನಲ್ಲಿ ರೂ.20.00 ಲಕ್ಷಗಳಿಗೆ ರಸ್ತೆ ನಿರ್ವಹಣೆ ಮಾಡಲಾಗುತ್ತಿದೆ. 2. ಸದರಿ ರಸ್ತೆಯ ಕಿ.ಮೀ.77.00 ರಿಂದ 90.00 ರವರೆಗೆ ದಿನಾಂಕ: 24.08.2020 ರಂದು ರಾಷ್ಟ್ರೀಯ ಹೆದ್ದಾರಿ ವಿಭಾಗ ವಿಜಯಪೂರ ಇವರಿಗೆ ಹಸ್ತಾಂತರಿಸಲಾಗಿದ್ದು, ರಾಷ್ಟ್ರೀಯ ಹೆದ್ದಾರಿಯಾಗಿ NH-548B ಮೇಲ್ದರ್ಜೆ ಗೇರಿಸಲಾಗಿದೆ. ಕಲಬುರ್ಗಿ ಜಿಲ್ಲೆ ಅಫಲಜಪುರ ತಾಲ್ಲೂಕಿನಿಂದ ಕರಜಗಿ ಗ್ರಾಮದ ಮೂಲಕ ಹೊಸೂರು ಸೇರುವ ರಸ್ತೆಯ ವ್ಯಾಪ್ತಿಯಲ್ಲಿ ನೂತನವಾಗಿ ಮೇಲ್ದರ್ಜೆಗೊಂಡ ರಾಷ್ಟ್ರೀಯ ಹೆದ್ದಾರಿ ನಂ-548ಬಿ ಕರಜಗಿಯಿಂದ ಮಣ್ಣೂರ ವರೆಗೆ 12 ಕಿ.ಮೀ. ರಸ್ತೆ (Over Lapping) ಇದ್ದು, ಸದರಿ ರಸ್ತೆಯಲ್ಲಿ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. 3. ಮುಂದುವರೆದು, ಸದರಿ ರಸ್ತೆ ಕಿ.ಮೀ.90.00 ರಿಂದ 99.80 ರವರೆಗೆ ಲೋಕೋಪಯೋಗಿ ಇಲಾಖೆಯಿಂದ ಸದ್ಯದಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿ ಕೊಡಲು 2021-22 ನೇ ಸಾಲಿನಲ್ಲಿ ರೂ.25.00 ಲಕ್ಷಗಳಿಗೆ ರಸ್ತೆ ನಿರ್ವಹಣೆ ಮಾಡಲಾಗುತ್ತಿದೆ.

ಕಡತ ಸಂಖ್ಯೆ: ಲೋಇ 234 ಸಿಎನ್‌ಹೆಚ್ 2021 (ಇ)

(ಸಿ.ಸಿ.ಪಾಟೀಲ)
ಲೋಕೋಪಯೋಗಿ ಸಚಿವರು